11

ಕರ್ನಾಟಕ ಸರ್ಕಾರ

ಉಪತಹಶೀಲ್ದಾರರವರ ನ್ಯಾಯಾಲಯ

ಉಪತಹಶೀಲ್ದಾರವರ ನಾಡಕಛೇರಿ, ಹಂಪಸಾಗರ

ಸಂ/ಕಂ/ಪಹಣಿ/ವಿವಾದ/16/2015–16 ದಿ:31.3.16

ಉಪಸ್ಥಿತರು :– ಶ್ರೀ ಎ.ಚಂದ್ರನಾಯಕ, ಉಪತಹಶೀಲ್ದಾರರು
ನಾಡಕಛೇರಿ ಹಂಪಸಾಗರ

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಕೆ.ಬಸಪ್ಪ ತಂದೆ ದಿ॥ ಕೆ.ಮಲ್ಲಪ್ಪ<br>ಗ್ರಾಮ ಮೋರಿಗೇರಿ | ಶ್ರೀ ಕೊಬ್ಬಜ್ಜಿ ಮಲ್ಲಪ್ಪ<br>ತಂದೆ ಬಸಪ್ಪ<br>ಮೋರಿಗೇರಿ ಗ್ರಾಮ |

**ವಿಷಯ :– ಮೋರಿಗೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 615/ಬಿ ವಿಸ್ತೀರ್ಣ 00–45 ಎಕರೆ ಕ್ರಯದಾರರ ಹೆಸರಿನಲ್ಲಿ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು ವಿಚಾರಣೆ.**

**ಪೀಠಿಕೆ :–**

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಮೋರಿಗೇರಿ ಗ್ರಾಮಕ್ಕೆ ಸೇರಿದ ಸ.ನಂ. 615 ಬಿ, ವಿಸ್ತೀರ್ಣ 00–45 ಎಕರೆ ಜಮೀನು ಶುದ್ಧ ಕ್ರಯಪತ್ರ ಸಂಖ್ಯೆ ಹೆಚ್.ಬಿ.ಹೆಚ್/1/00198/2015–16/ದಿನಾಂಕ: 18/04/2015 ರಂದು ಹಾಲಿ ಪಹಣಿ ಹಕ್ಕುದಾರರಾದ ಕೊಬ್ಬಜ್ಜಿ ಮಹಬಲೇಶ್ವರಪ್ಪ ತಂದೆ ಈಶ್ವರಪ್ಪ ಮೋರಿಗೇರಿ ಇವರಿಂದ ಕೆ.ಬಸಪ್ಪ ತಂದೆ ದಿ॥ ಕೆ.ಮಲ್ಲಪ್ಪ ಇವರಿಗೆ ಕ್ರಯಕ್ಕೆ ನೊಂದಣಿಯಾಗಿರುತ್ತದೆ. ಇದರನ್ವಯ ತಾಲೂಕು ಭೂಮಿ ಕೇಂದ್ರದಲ್ಲಿ ಕ್ರಯ ವಹಿವಾಟು ಸಂಖ್ಯೆ 321/2014–15 ಹಾಗೂ ಹಕ್ಕು ಬದಲಾವಣೆ ಸಂಖ್ಯೆ 130/2014–15 ರಂತೆ ದಾಖಲಾಗಿ ನಮೂನೆ 12 ಹಾಗೂ ನೋಟೀಸು ನಮೂನೆ 21 ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ಮುಂದಿನ ಹಕ್ಕು ಬದಲಾವಣೆ ಕ್ರಮಕ್ಕಾಗಿ ರವಾನಿಸಲಾಗಿದ್ದು ಸದರಿ ನೋಟೀಸುಗಳು ಗ್ರಾಮ ಲೆಕ್ಕಾಧಿಕಾರಿ ಮೋರಿಗೇರಿ ಇವರಿಂದ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿ ಮಾಡಲಾಗಿ ಪ್ರತಿವಾದಿಗಳು ತಮ್ಮ ತಕರಾರನ್ನು ಭೂಮಿ ಕೇಂದ್ರದಲ್ಲಿನ ಸ್ವೀಕೃತಿ ಸಂಖ್ಯೆ 8334/2014–15 ರಂತೆ ದಾಖಲಿಸಿರುತ್ತಾರೆ. ತಕರಾರು ದಾಖಲಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸುತ್ತಾ ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣವು ಈ ಮೇಲಿನ ಸಂಖ್ಯೆಯಂತೆ ದಾಖಲಾಗಿ ದಿನಾಂಕ: 10/07/2015 ರಿಂದ 31/03/2016 ರವರೆಗ ವಿಚಾರಣೆ ನಡೆಸಲಾಯಿತು.

ಪ್ರತಿವಾದಿಗಳ ಪರವಾಗಿ ಶ್ರೀ ಯು.ಕೊಟ್ರೇಶ ನ್ಯಾಯವಾದಿಗಳು ವಕಾಲತ್ ವಹಿಸಿಕೊಂಡಿದ್ದು ವಾದಿಗಳು ತಾವೇ ಖುದ್ದು ಹಾಜರಾಗಿರುವರು. ಪ್ರಕರಣಕ್ಕೆ ಸಂಬಂಧಿಸಿದ

ದಾಖಲೆಗಳನ್ನು ಪರಿಶೀಲಿಸಲಾಗಿ ವಾದಿಗಳು ವಿಕ್ರಯದಾರರಿಂದ ಶುದ್ದ ಕ್ರಯಪತ್ರ ಸಂಖ್ಯೆ ಹೆಚ್.ಬಿ.ಹೆಚ್/1/00198/2015-16/ದಿನಾಂಕ: 18/04/2015 ರಂತೆ ವಿವಾದಿತ ಆಸ್ತಿಯನ್ನು ಕ್ರಯಕ್ಕೆ ಹೊಂದಿರುತ್ತಾರೆ. ವಿಕ್ರಯದಾರರು ಮಾರಾಟದ ಪೂರ್ವದಲ್ಲಿ ತಮ್ಮ ಅನುಭವದ ಆಸ್ತಿಯನ್ನು ತಾಲೂಕು ಮೋಜಿಣಿದಾರರಿಂದ ಅಳತೆ ಮಾಡಿಸುತ್ತಾ ವಿಭಜನೆಗೆ ಸಂಬಂಧಿಸಿದ 11-ಇ ನಕ್ಷೆ ಸಂಖ್ಯೆ 12020813821806001 ರಂತೆ ಹೊಂದುತ್ತಾ ನಿಯಮಾನುಸಾರ ಮಾರಾಟ ಮಾಡಿರುತ್ತಾರೆ. ಪ್ರತಿವಾದಿಗಳು ತಮ್ಮ ತಕರಾರನ್ನು ಸಲ್ಲಿಸಿರುವುರಾದರೂ ತಕರಾರು ಯಾವ ಬಾಬತ್ತಿಗಾಗಿ ಅಂದರೆ ಅವಿಭಕ್ತ ಕುಟುಂಬದ ಆಸ್ತಿಯೇ, ಜಂಟೀ ಹಕ್ಕುದಾರರಿಗೆ ಸಂಬಂಧಿಸಿದ್ದೆ ಅಥವಾ ವಾರಸಾ ವಿವರಕ್ಕೆ ಸಂಬಂಧಿಸಿದ್ದೆ ಅಥವಾ ಇನ್ನಾವುದೇ ಉದ್ದೇಶಕ್ಕಾಗಿ ತಕರಾರು ಸಲ್ಲಿಸಿದ್ದು ಇತ್ಯಾದಿಗಳಿಗೆ ಕಾರಣಗಳನ್ನು ನೀಡದೆಯೇ ಕೇವಲ ಹಕ್ಕು ಬದಲಾವಣೆ ಮಾಡಬಾರದಾಗಿ ತಕರಾರು ಸಲ್ಲಿಸಿರುವರು.

ಕ್ರಯಪತ್ರ, ಪಹಣಿ, ನಕ್ಷೆ ಪರಿಶೀಲಿಸಲಾಗಿ ಕ್ರಯ ವ್ಯವಹಾರವು ನಿಯಮಾನುಸಾರ ನಡೆದಿರುವುದು ಕಂಡು ಬಂದಿದೆ. ಹಾಗೂ ಪ್ರತಿವಾದಿಗಳ ನ್ಯಾಯವಾದಿಗಳು ಸಹ ಯಾವುದೇ ಲಿಖಿತ ವಾದವನ್ನು ಮಂಡಿಸಿರುವುದಿಲ್ಲ. ಆದ್ದರಿಂದ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು ಹಂಪಸಾಗರ ಹೋಬಳಿ, ಮೋರಿಗೇರಿ ಗ್ರಾಮಕ್ಕೆ ಸೇರಿದ ಆಸ್ತಿ ಸ.ನಂ. 615/ಬಿ ಪೈಕಿ 00-45 ಎಕೆರೆ ಜಮೀನನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 128 ಮತ್ತು 129 ರನ್ವಯ ಕ್ರಯದಾರರಾದ ಶ್ರೀ ಕೆ.ಬಸಪ್ಪ ತಂದೆ ದಿ॥ ಕೆ.ಮಲ್ಲಪ್ಪ ಇವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ. ಈ ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ: 31.3.16 ರಂದು ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಗಳು :
1) ವಾದಿ + ಪ್ರತಿವಾದಿಗಳು
2) ಭೂಮಿ ಕೇಂದ್ರ ತಾಲೂಕು ಕಛೇರಿ
3) ಹೆಚ್ಚುವರಿ ಪ್ರತಿಕಡತಕ್ಕೆ